ಉಪನಿರ್ದೇಶಕರು(ಖಾಗ್ರಾ), ಜಿಲ್ಲಾ ಪಂಚಾಯತ್ ವಿಭಾಗದಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಮತ್ತು ಸವಲತ್ತುಗಳನ್ನು ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮೀಣ ಕುಶಲಕರ್ಮಿಗಳಿಗೆ ಮತ್ತು ಸ್ವ-ಉದ್ಯೋಗ ಕೈಗೊಳ್ಳಲು ನಿರುದ್ಯೋಗಿಗಳಿಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡುವುದು.

- ಗ್ರಾಮೀಣ ಮಟ್ಟದ ನಿರುದ್ಯೋಗ ಯುವಕ ಯುವತಿಯರಿಗೆ ಮತ್ತು ಕುಶಲಕರ್ಮಿಗಳಿಗೆ ತರಬೇತಿಯನ್ನು ಒದಗಿಸಿ ನಂತರ ಅವರಿಗೆ ಉಪಯುಕ್ತವಾದ ಸುಧಾರಿತ ಸಲಕರಣೆ ವಿತರಿಸುವುದು.
- ಗ್ರಾಮೀಣ ಮಟ್ಟದಲ್ಲಿ ನಿರುದ್ಯೋಗ ಯುವಕ ಯುವತಿಯರಿಗೆ ಮತ್ತು ಕುಶಲಕರ್ಮಿಗಳಿಗೆ ಸ್ವ-ಉದ್ಯೋಗ ಕೈಗೊಳ್ಳಲು ಮತ್ತು ಸರಕಾರದ ಇತರ ಇಲಾಖೆಗಳಿಂದ ಸಂಬಂಧಿಸಿದಂತೆ ಮಾಹಿತಿಯನ್ನು ನೀಡುವ ಕುರಿತು ವಿಚಾರಗೋಷ್ಠಿ ಏರ್ಪಡಿಸುವದು. ಮತ್ತು ಗ್ರಾಮೀಣ ಮಟ್ಟದಲ್ಲಿ ತಯಾರಿಸಿದ ಉತ್ಪನ್ನಗಳನ್ನು ಮಾರಾಟ ಮತ್ತು ಪ್ರರ್ದಶನಕ್ಕಾಗಿ ವಸ್ತುಪ್ರದರ್ಶನ ಏರ್ಪಡಿಸುವುದು.
- ಗ್ರಾಮೀಣ ಮಟ್ಟದಲ್ಲಿ ಸ್ಥಿತವಾದ ಕುಶಲಕರ್ಮಿಗಳು ಮತ್ತು ಅತಿ ಸಣ್ಣ ಕೈಗಾರಿಕೆಗಳು (ಸ್ಥಿರ ಬಂಟವಾಳ ರೂ.2.00 ಲಕ್ಷಕ್ಕೆ ಸಿಮೀತಗೊಳಿಸಿ) ಪಡೆದ ಬ್ಯಾಂಕ ಸಾಲದ ಮೇಲೆ ಬಡ್ಡಿ ಸಹಾಯಧನ ಮಂಜೂರು ಮಾಡುವುದು.
- ಗ್ರಾಮೀಣ ಮಟ್ಟದಲ್ಲಿ ಸ್ಥಿತವಾದ ವೃತ್ತಿ ನಿರತ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆಯನ್ನು ವಿತರಿಸುವುದು.
- ತಾಲ್ಲೂಕು ಮಟ್ಟದಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳನ್ನು ಅನುಷ್ಠಾನಗೊಳಿಸಲು ಪರಿಶೀಲನೆ ಮಾಡುವುದು.

**ಇಲಾಖೆಯ ಸಂಕ್ಷಿಪ್ತ ವಿವರ.**

1)ಇಲಾಖೆಯ ವಿವರ: ಉಪನಿರ್ದೇಶಕರು(ಖಾಗ್ರಾ) ಕಛೇರಿಯು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಡಿಯಲ್ಲಿ ಮತ್ತು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತದೆ. ಸದರಿ ಕಛೇರಿಯಲ್ಲಿ ಗ್ರಾಮೀಣ ಮಟ್ಟದಲ್ಲಿ ಕುಶಲಕರ್ಮಿಗಳಿಗೆ , ಯುವಕ ಯುವತಿಯರಿಗೆ ಸ್ವ-ಉದ್ಯೋಗ ಕೈಗೊಳ್ಳುವ ಬಗ್ಗೆ ಮಾಹಿತಿ, ತರಬೇತಿ, ಮಾರ್ಗದರ್ಶನ ಇತರ ಚಟುವಟಿಕೆಗಳನ್ನು ಮಾಡುತ್ತದೆ. ಹಾಗೂ ಇ ಬಗ್ಗೆ ವಿಚಾರ ಗೋಷ್ಟಿಗಳನ್ನು ತಾಲ್ಲೂಕುಮಟ್ಟದಲ್ಲಿ ಏರ್ಪಡಿಸಿ ವಿವಿಧ ಸರ್ಕಾರಿ ಇಲಾಖೆಗಳ ಮತ್ತು ನಿಗಮ ಮಂಡಳಿಗಳ ಮಾಹಿತಿಯನ್ನು ನೀಡಲಾಗುತ್ತದೆ. ಕುಶಲಕರ್ಮಿಗಳು ಪಡೆದ ಸಾಲದ ಬಡ್ಡಿಗೆ ಬಡ್ಡಿ ಸಹಾಯಧನ ಕ್ರಿಯಾಯೋಜನೆಯಲ್ಲಿ ಒದಗಿಸಿದ ಅನುದಾನದಂತೆ ಅನುಷ್ಠಾನಗೊಳಿಸಲಾಗುತ್ತದೆ.

ಸದರಿ ಕಛೇರಿಯ ವಿಳಾಸ ಈ ಕೆಳಕಂಡಂತಿದೆ

**ಉಪನಿರ್ದೇಶಕರು(ಖಾದಿ ಮತ್ತು ಗ್ರಾಮುದ್ಯೋಗ ಕೈಗಾರಿಕೆಗಳು) ರವರ ಕಛೇರಿ**
**ಎ.ಪಿ.ಎಮ್.ಸಿ. ಸಿಬ್ಬಂದಿ ಕ್ವಾರ್ಟರ್ಸ,**
**ಗಂಜ ಪ್ರದೇಶ, ಹೈದ್ರಾಬಾದ ರೋಡ,**
**ಯಾದಗಿರಿ-585202**

Raghoji
ಉಪನಿರ್ದೇಶಕರು (ಖಾಗ್ರಾ)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿಲ್ಲಾ ಪಂಚಾಯತ ಯಾದಗಿರಿ

**) ಇಲಾಖೆಗೆ ಸಂಬಂಧಿಸಿದ ಕಾರ್ಯಕ್ರಮಗಳು.**

**ಅ) ಜಿಲ್ಲಾ ಉದ್ಯಮ ಕೇಂದ್ರ: 2851-00-107-0-27**

ಸದರಿ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಮಟ್ಟದ ನಿರುದ್ಯೋಗಿಗಳಿಗೆ ತರಬೇತಿ ಜರುಗಿಸಿ ಸಲಕರಣೆ ವಿತರಿಸಲಾಗುವುದು. 2011-12 ನೇ ಸಾಲಿನಲ್ಲಿ ಕ್ರಿಯಾ ಯೋಜನೆಯಂತೆ ರೂ.2.00 ಲಕ್ಷ ಅನುದಾನ ಕಲ್ಪಿಸಲಾಗಿದೆ. ಇದರಲ್ಲಿ 40 ಜನ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ವಿತರಿಸಲಾಗುವುದು.

**ಆ) ವಿಚಾರ ಗೋಷ್ಠಿಗಳು, ಕ್ಷೇತ್ರೋತ್ಸವಗಳು ಮತ್ತು ವಸ್ತುಪ್ರದರ್ಶನಗಳು: 2851-00-107-0-34**

ಸದರಿ ಕಾರ್ಯಕ್ರಮದಡಿಯಲ್ಲಿ ಜಿಲ್ಲಾ ಪಂಚಾಯತ್ ಯಾದಗಿರಿ ವತಿಯಿಂದ ಮೈಸುರು ದಸರಾ ಉತ್ಸವದಲ್ಲಿ ಸ್ತಬ್ಧ ಚಿತ್ರ ಪ್ರದರ್ಶನ ಕೈಗೊಳ್ಳಲಾಗುವುದು ಮತ್ತು ಪ್ರತಿ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಮಟ್ಟದ ವಿಚಾರ ಗೋಷ್ಠಿಯನ್ನು ಏರ್ಪಡಿಸಲಾಗುವುದು. 2011-12 ನೇ ಸಾಲಿಗೆ ಕ್ರಿಯಾ ಯೋಜನೆಯಂತೆ ರೂ.2.00 ಲಕ್ಷ ಅನುದಾನ ಕಲ್ಪಿಸಲಾಗಿದೆ.

**ಇ)ಸಣ್ಣ ಕೈಗಾರಿಕೆಗಳ ಕುಶಲಕರ್ಮಿಗಳು ಸೇರಿದಂತೆ ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ: 2851-00-107-0-39**

ಸದರಿ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಮಟ್ಟದಲ್ಲಿ ಕುಶಲಕರ್ಮಿಗಳು ಮತ್ತು ಅತಿ ಸಣ್ಣ ಕೈಗಾರಿಕೆಗಳು (ಸ್ಥಿರಾಸ್ತಿ ರೂ.2.00ಲಕ್ಷ ಒಳಗೆ ಇರುವ) ಪಡೆದ ಬ್ಯಾಂಕಿನ ಸಾಲದ ಬಡ್ಡಿಯ ಮೇಲೆ ವ್ಯತ್ಯಾಸದ ಬಡ್ಡಿ ಸಹಾಯಧನವನ್ನು ಗರಿಷ್ಠವಾಗಿ ಶೇಕಡಾ 5 ರಷ್ಟು ಮಂಜುರು ಮಾಡಲಾಗುವುದು. 2011-12 ನೇ ಸಾಲಿಗೆ ಕ್ರಿಯಾ ಯೋಜನೆಯಂತೆ ರೂ.0.30ಲಕ್ಷ ಕಲ್ಪಿಸಲಾಗಿದೆ.

**ಈ) ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು:2851-00-107-0-32**

ಸದರಿ ಕಾರ್ಯಕ್ರಮದಡಿಯಲ್ಲಿ ಗ್ರಾಮೀಣ ಮಟ್ಟದಲ್ಲಿ ಸ್ಥಿತವಾದ ವೃತ್ತಿಪರ ಕುಶಲಕರ್ಮಿಗಳಿಗಿ ಅವರ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಮತ್ತು ಗುಣಮಟ್ಟದ ಉತ್ಪನ್ನ ತಯಾರಿಸಲು ಅವರಿಗೆ ಉಚಿತವಾಗಿ ಸುಧಾರಿತ ಸಲಕಣೆಗಳನ್ನು ಪೂರೈಕೆ ಮಾಡಲಾಗುವುದು. 2011-12 ನೇ ಸಾಲಿಗೆ ಕ್ರಿಯಾ ಯೋಜನೆಯಂತೆ ರೂ.2.00ಲಕ್ಷ ಅನುದಾನ ಕಲ್ಪಿಸಲಾಗಿದೆ.

**3) ಇಲಾಖೆಯ ದೂರವಾಣಿ ಸಂಖ್ಯೆ: 08473-253791.**